# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ-4160/2014/ಡಿ.ಆರ್.ಇ-2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 10/02/2020

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ದಿನಾಂಕ: 01/01/2019ರ ಜಿಲ್ಲಾ ಅಂಕಿತ ಅಧಿಕಾರಿಗಳು, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006, ತುಮಕೂರು ಜಿಲ್ಲೆ, ತುಮಕೂರು ವರದಿಯಲ್ಲಿ ತಿಳಿಸಿರುವಂತೆ ಸೂಕ್ತ ಪ್ರಾಧಿಕಾರದಿಂದ ಅಂದರೆ ಬಿ.ಐ.ಎಸ್., ಕಾಯ್ದೆ ಅನ್ವಯ ಸೂಕ್ತ ಪ್ರಮಾಣ ಪತ್ರ ಪಡೆಯದೇ ಇರುವ ಶುದ್ಧ ಕುಡಿಯುವ ನೀರಿನ ಘಟಕ ತೆರೆವುಗೊಳಿಸುವ ಬಗ್ಗೆ ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ ರಂಗನಾಥಪ್ಪ ಬಿನ್ ಯಲ್ಲಪ್ಪ, ಗವಿರಂಗಪ್ಪ ನಿಲಯ, 3ನೇ ಕ್ರಾಸ್, ವಿದ್ಯಾನಗರ ತುಮಕೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, ಡಾ: ಅವಿನಾಶ್, ಜಿಲ್ಲಾ ಅಂಕಿತ ಅಧಿಕಾರಿಗಳು, ಆಹಾರ ಸುರಕ್ಷತೆ ಮತ್ತು ಗುಣಮಟ್ಟ, ತುಮಕೂರು ಜಿಲ್ಲೆ, ತುಮಕೂರು (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ರವರು ಸಂಬಂಧಪಟ್ಟ ತುಮಕೂರು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿ, ಐ.ಎಸ್.ಐ., ಚಿಹ್ನೆಯಿಲ್ಲದ ಕುಡಿಯುವ ನೀರಿನ ಘಟಕಗಳನ್ನು ಮುಚ್ಚುವ ಬಗ್ಗೆ ನಿರ್ದೇಶನವಿದ್ದರೂ ಸಹ ಎದುರುದಾರರು ನ್ಯಾಯಾಲಯದ

ಆದೇಶವನ್ನು ಪಾಲಿಸದೇ ಕರ್ತವ್ಯ ಲೋಪ ಎಸಗಿರುತ್ತಾರೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಲು ಕೋರಿರುತ್ತಾರೆ.

3. ದೂರುದಾರರು ತಮ್ಮ ದೂರಿನ ಜೊತೆಗೆ ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 17713/2012, 24257/2012 ಮತ್ತು 47320–330–2012, 17467–17498/2012 (ಜಿ.ಎಂ–ಆರ್.ಇ.ಎಸ್–ಪಿ.ಐ.ಎಲ್) ಆದೇಶದ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

4. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯದ ಆದೇಶದಂತೆ ಮತ್ತು ಇಲಾಖಾ ಮೇಲಾಧಿಕಾರಿಗಳ ಮಾರ್ಗದರ್ಶನದಂತೆ ಕಾರ್ಯನಿರ್ವಹಿಸಿದ್ದು, ಶಿವಗಂಗಾ ವಾಟರ್ ಮನರಲ್ ಘಟಕದವರು ತಮ್ಮ ಕಛೇರಿಗೆ ಐ.ಎಸ್.ಐ. ಪ್ರಮಾಣ ಪತ್ರ ಪಡೆದಿರುವ ಬಗ್ಗೆ ಪರವಾನಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಅದರಂತೆ, ಘಟಕವು ಕಾರ್ಯನಿರ್ವಹಿಸಿರುತ್ತದೆ. ಮಾನ್ಯ ಉಚ್ಛ ನ್ಯಾಯಾಲಯದ ಆದೇಶದಂತೆ ಐ.ಎಸ್.ಐ. ಪರವಾನಗಿ ಪಡೆಯದಿರುವ ನೀರಿನ ಘಟಕಗಳನ್ನು ಮುಚ್ಚಲಾಗಿರುತ್ತದೆ. ಇದರಲ್ಲಿ ತಮ್ಮದು ಯಾವುದೇ ಕರ್ತವ್ಯ ಲೋಪ ಇಲ್ಲವೆಂದು ಹೇಳಿರುತ್ತಾರೆ.

5. ದೂರುದಾರರ ದೂರು ಮತ್ತು ದಾಖಲೆಗಳು ಹಾಗೂ ಎದುರುದಾರರ ಆಕ್ಷೇಪಣೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಲಭ್ಯವಿರುವ ದಾಖಲೆಗಳ ಪ್ರಕಾರ, ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ರವರು ಸಂಬಂಧಪಟ್ಟ ತುಮಕೂರು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿ, ಐ.ಎಸ್.ಐ. ಚಿಹ್ನೆಯಿಲ್ಲದ ಕುಡಿಯುವ ನೀರಿನ ಘಟಕಗಳನ್ನು ಮುಚ್ಚುವ ಬಗ್ಗೆ ನಿರ್ದೇಶನವಿದ್ದರೂ ಸಹ ಎದುರುದಾರರು ನ್ಯಾಯಾಲಯದ ಆದೇಶವನ್ನು ಪಾಲಿಸದೇ ಕರ್ತವ್ಯ ಲೋಪ ಎಸಗಿರುವುದಾಗಿ ದೂರುದಾರರು ಹೇಳಿರುತ್ತಾರೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ಐ.ಎಸ್.ಐ. ಚಿಹ್ನೆ ಹೊಂದಿರುವ ಘಟಕಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಐ.ಎಸ್.ಐ. ಚಿಹ್ನೆಯಿಲ್ಲದ ಕುಡಿಯುವ ನೀರಿನ ಘಟಕಗಳನ್ನು ಮುಚ್ಚಲಾಗಿರುತ್ತದೆ. ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ರವರ ಆದೇಶದಂತೆ ಐ.ಎಸ್.ಐ. ಗುಣಮಟ್ಟವಿರುವ ಘಟಕಗಳು ಮಾತ್ರ ಕಾರ್ಯನಿರ್ವಹಿಸುತ್ತಿದೆಯೆಂದು ಹೇಳಿರುತ್ತಾರೆ.

6. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ಆದೇಶದಂತೆ ಎಷ್ಟು ಮಿನಿರಲ್ ವಾಟರ್ ಘಟಕಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ಜಿಲ್ಲಾ ಅಂಕಿತ ಅಧಿಕಾರಿಗಳು, ಎಫ್.ಎಸ್.ಎಸ್.ಎ., ತುಮಕೂರು ರವರನ್ನು ಕೇಳಲಾಗಿ, ಸದರಿಯವರು ತಮ್ಮ ವರದಿಯಲ್ಲಿ ಐ.ಎಸ್.ಐ. ಪ್ರಮಾಣ ಪತ್ರ ಪಡೆಯದೇ ಸಂಸ್ಕರಿಸಿದ ನೀರನ್ನು 20 ಲೀಟರ್ ಕ್ಯಾನ್‌ಗಳಲ್ಲಿ ಪ್ಯಾಕ್ ಮಾಡಿ ಮಾರಾಟ ಮಾಡುತ್ತಿದ್ದ ಘಟಕಗಳ ವಿರುದ್ಧ ಕಾರ್ಯಾಚರಣೆ ಮಾಡಲಾಗಿ, ತುಮಕೂರು ಜಿಲ್ಲೆಯಲ್ಲಿ ಒಟ್ಟು 78 ಘಟಕಗಳು ಕಂಡುಬಂದಿರುತ್ತದೆ. ಅದರಲ್ಲಿ, 9 ಘಟಕಗಳು ಐ.ಎಸ್.ಐ. ಪ್ರಮಾಣ ಪತ್ರ ಪಡೆದಿವೆ, 30 ಘಟಕಗಳಿಗೆ ಬೀಗ ಮುದ್ರೆ ಹಾಕಿದ್ದು, 35 ಘಟಕಗಳು ಸ್ವಯಂ ಮುಚ್ಚಿರುತ್ತವೆ, 3 ಘಟಕಗಳು ಅಸ್ತಿತ್ವದಲ್ಲಿ ಇಲ್ಲದೇ ಇರುವುದು ಕಂಡುಬಂದಿರುತ್ತದೆ, ಅಲ್ಲದೇ 1 ಘಟಕಕ್ಕೆ ಐ.ಎಸ್.ಐ., ನವೀಕರಣ ಪ್ರಮಾಣ ಪತ್ರ ಪಡೆಯಲು 15 ದಿನಗಳ ಕಾಲಾವಕಾಶ ನೀಡಲಾಗಿರುತ್ತದೆ. ಈ ಬಗ್ಗೆ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ಸಹ ರವಾನೆ ಪತ್ರ ನೀಡಲಾಗಿದೆ. ದಿನಾಂಕ: 21/11/2015 ರಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧೀನ ಕಾರ್ಯದರ್ಶಿಗಳು ಕುಡಿಯುವ ನೀರಿನ ಉತ್ಪಾದನೆ ಮತ್ತು ಮಾರಾಟ ತಡೆಗಟ್ಟಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತನಿಖಾ ದಳ ರಚಿಸಲು ಆದೇಶಿಸಿದ್ದು, ಅದರಂತೆ ದಿನಾಂಕ: 22/11/2016 ರಂದು ತನಿಖಾ ದಳ ರಚಿಸಿ ಸಭೆಯ ನಡವಳಿಯಲ್ಲಿ ಜಿಲ್ಲೆಯಲ್ಲಿ ಒಟ್ಟು 89 ಘಟಕಗಳ ಮಾಹಿತಿಯನ್ನು ಚರ್ಚಿಸಿ ಐ.ಎಸ್.ಐ. ಪ್ರಮಾಣ ಪತ್ರ ಹೊಂದಿರುವ ಘಟಕಗಳನ್ನು ಹುಡುಕಿ ಉಳಿದ ಎಲ್ಲಾ ಘಟಕಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ತೀರ್ಮಾನಿಸಲಾಗಿದೆ.

7. ದಿನಾಂಕ: 05/12/12016 ರಂದು ಕಾರ್ಯಪಾಲಕ ಅಭಿಯಂತರರು, ಓ & ಎಂ ತುಮಕೂರು ಚೆಸ್ಕಾಂ ರವರಿಗೆ ತನಿಖಾ ದಳದ ನಿರ್ದೇಶನದಂತೆ ಐ.ಎಸ್.ಐ. ಪ್ರಮಾಣ ಪತ್ರ ಇಲ್ಲದ ಘಟಕಗಳ ಪಟ್ಟಿ ನೀಡಿ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ತಿಳಿಸಲಾಗಿದೆ. ಸಮಿತಿಯ ತೀರ್ಮಾನದಂತೆ ಪ್ರಸ್ತುತ ಜಿಲ್ಲೆಯಲ್ಲಿ 26 ಘಟಕಗಳು ಐ.ಎಸ್.ಐ. ಪ್ರಮಾಣ ಪತ್ರ ಪಡೆದಿದ್ದು, ಉಳಿದ 63 ಘಟಕಗಳಿಗೆ ವಿದ್ಯುತ್ ಸಂಪರ್ಕ ಕಡತಗೊಳಿಸಲು ಕ್ರಮ ಕೈಗೊಳ್ಳಲು ತಿಳಿಸಲಾಗಿದೆ ಅಂತಾ ಅಪೂರ್ಣ ವರದಿ ಸಲ್ಲಿಸಿದ್ದರಿಂದ, ಈ ಬಗ್ಗೆ ದಿನಾಂಕ: 23/02/2013 ರಂದು ತುಮಕೂರಿನಲ್ಲಿ ನಡೆದ ಕ್ಯಾಂಪ್‌ನಲ್ಲಿ ಎದುರುದಾರರಿಗೆ ಈ ಬಗ್ಗೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ವರದಿ ಸಲ್ಲಿಸುವಂತೆ ತಿಳಿಸಲಾಗಿತ್ತು.

8. ದಿನಾಂಕ: 01/01/2019 ರಂದು ಜಿಲ್ಲಾ ಅಂಕಿತ ಅಧಿಕಾರಿಗಳು, ಆಹಾರ ಸುರಕ್ಷತೆ ಮತ್ತು ಗಣಮಟ್ಟ ಕಾಯ್ದೆ 2006, ತುಮಕೂರು ಜಿಲ್ಲೆ, ತುಮಕೂರು ರವರು ವರದಿ ಸಲ್ಲಿಸಿದ್ದು, ಅದರಲ್ಲಿ ನಂ. ಎಫ್.ಎಫ್.ಎಸ್.ಎ./ಇ.ಎನ್.ಎಫ್/41/2018-19 ರಂದು ಮಾನ್ಯ ಆಯುಕ್ತರು, ಆಹಾರ ಸುರಕ್ಷತೆ, ಬೆಂಗಳೂರು ತಮ್ಮ ಪತ್ರದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಕುಡಿಯುವ ನೀರಿನ ಘಟಕಗಳನ್ನು ತೆರೆವುಗೊಳಿಸಲು ಸೂಚಿಸಿದ್ದು, ಸದರಿ ವಿಷಯದ ಬಗ್ಗೆ ನಿಯಮಗಳನ್ನು ರೂಪಿಸುವ ಪ್ರಕ್ರಿಯೆ ಚಾಲನೆಯಲ್ಲಿದ್ದು, ಅಂತಿಮ ನಿಯಮಗಳು ಬರುವವರೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ಬೀಗ ಮುದ್ರೆ ತೆರೆವುಗೊಳಿಸಲು ಸೂಚಿಸಿರುತ್ತಾರೆ. ಆಯುಕ್ತರ ಆದೇಶದಂತೆ ದಿನಾಂಕ: 15/12/2018 ರಂದು ಶಿರಾ ತಾಲ್ಲೂಕು ಬಿಗ ಮುದ್ರೆಗೊಳಿಸಿದ್ದ ಶ್ರೀ ಕ್ಷೇತ್ರ ಧರ್ಮಸ್ಥಳ ಕುಡಿಯುವ ನೀರಿನ ಘಟಕಗಳನ್ನು ತೆರೆವುಗೊಳಿಸಲಾಗಿರುತ್ತದೆ. ಸದರಿ ಆದೇಶದಂತೆ 57 ಘಟಕಗಳು ಡಾಕ್ಟರ್ಸ್ ವಾಟರ್ಸ್, ಶ್ರೀ ಕ್ಷೇತ್ರ ಧರ್ಮಸ್ಥಳ, ಇತರೆ ಸಂಘ ಸಂಸ್ಥೆಗಳಿಂದ ನಡೆಯುತ್ತಿದ್ದು, ಈ ಘಟಕಗಳು ಸಮುದಾಯ ಕುಡಿಯುವ ನೀರಿನ ಘಟಕಗಳು (Loose Waters) ಘಟಕಗಳು ಆಗಿರುತ್ತವೆ. ಮುಂದಿನ ಆದೇಶದವರೆಗೆ ಸದರಿ ಘಟಕಗಳನ್ನು ಪಟ್ಟಿಯಿಂದ ಕೈಬಿಟ್ಟಿದೆ, ಉಳಿದ 13 ಘಟಕಗಳಲ್ಲಿ 2 ಘಟಕಗಳು ಆಯುಷ್ ಇಲಾಖೆಯ ವ್ಯಾಪ್ತಿಯಲ್ಲಿದ್ದು, ಉಳಿದ 11 ಘಟಕಗಳಲ್ಲಿ 8 ಘಟಕಗಳಿಗೆ ಅಗತ್ಯ ಕ್ರಮ ಕೈಗೊಂಡಿದ್ದು, 3 ಘಟಕಗಳಿಗೆ ನೋಟಿಸ್ ಜಾರಿಯಾಗಿದೆ ಅಂತಾ ಮಾಹಿತಿ ನೀಡಿದ್ದಾರೆ.

9. ಸದರಿ ವರದಿಯೊಂದಿಗೆ 2 ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದು, ಸದರಿ ಛಾಯಾಚಿತ್ರಗಳಲ್ಲಿ ಧರ್ಮಸ್ಥಳದ ಗ್ರಾಮೀಣ ಅಭಿವೃದ್ಧಿ ಸಂಘ (ರಿ)., ಶುದ್ಧ ಗಂಗಾ ಕುಡಿಯುವ ನೀರಿನ ಘಟಕ, ಬಾಲಾಜಿ ನಗರ, ಶಿರಾ ರವರು ದಿನಾಂಕ: 15/12/2018 ರಂದು ಬೀಗ ಮುದ್ರೆ ತೆರೆವುಗೊಳಿಸಲಾಗಿದೆ ಅಂತಾ ತಿಳಿಸಿದ್ದಾರೆ. ಅಲ್ಲದೇ 22/10/2018 ರಂದು 8 ಘಟಕಗಳ ಬಗ್ಗೆ ವರದಿ ಸಲ್ಲಿಸಿದ್ದು, 7 ಘಟಕಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿದೆ, ರಂಗನಾಥ್ ಹನಿ ಪ್ಯಾಕ್ಡ್ ಡ್ರಿಂಕಿಂಗ್ ವಾಟರ್ ಘಟಕದಲ್ಲಿ ಯಂತ್ರೋಪಕರಣಗಳು ಕಂಡುಬಂದಿರುವುದಿಲ್ಲ, ಐ.ಎಸ್.ಐ., ಪ್ರಮಾಣ ಪತ್ರ ಪಡೆಯುವ ಸಿದ್ಧತೆಯಲ್ಲಿದೆ ಅಂತಾ ಉಲ್ಲೇಖಿಸಿದ್ದಾರೆ. ಸದರಿ ವರದಿಯಿಂದ ಮೇಲ್ನೋಟಕ್ಕೆ ಕಂಡುಬರುವುದೇನೆಂದರೇ, ಮಾನ್ಯ ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ನೀಡಿರುವ ಆದೇಶದಂತೆ ಕಾನೂನು ಬಾಹಿರವಾಗಿ ಶಿರಾ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಎಲ್ಲಾ ಘಟಕಗಳನ್ನು ತೆರೆವುಗೊಳಿಸಿಲ್ಲ, ಇನ್ನು ಕೆಲವು ಘಟಕಗಳಿಗೆ ನೋಟಿಸ್ ನೀಡಿದ್ದಾರೆ ಎಂಬುದು ಕಂಡುಬರುತ್ತದೆ.

10. ದಿನಾಂಕ: 23/02/2018 ರಂದು ತುಮಕೂರು ಕ್ಯಾಂಪ್‌ನಲ್ಲಿ, ಕುಡಿಯುವ ನೀರಿನ ಘಟಕಗಳನ್ನು ಪ್ರಾರಂಭಿಸಬೇಕಾದರೆ ಅಗತ್ಯ ಪ್ರಮಾಣ ಪತ್ರಗಳನ್ನು ಹಾಗೂ ಸದರಿ ನೀರಿನಿಂದ ಮಾನವ ಆರೋಗ್ಯಕ್ಕೆ ಯಾವುದೇ ತೊಂದರೆ ಆಗುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಂಡು ಸೂಕ್ತ ಪ್ರಾಧಿಕಾರದಿಂದ ಅನುಮತಿ ಪಡೆದುಕೊಂಡು ನಡೆಸಬೇಕಾಗುತ್ತದೆ ಎಂದು ಅಲ್ಲದೇ, ಕುಡಿಯುವ ನೀರಿನಿಂದಲೇ ಮಾನವ ಜೀವಕ್ಕೆ ಮತ್ತು ಆರೋಗ್ಯಕ್ಕೆ ಸಾಕಷ್ಟು ತೊಂದರೆಗಳು ಆಗುತ್ತಿದ್ದು, ಬೇಸಿಗೆಯ ಕಾಲದಲ್ಲಿಯೂ ಸಹಿತ ಸುರಕ್ಷಿತವಲ್ಲದ ಕುಡಿಯುವ ನೀರಿನ ಘಟಕದಿಂದ ಪಡೆದು ಕುಡಿದ ನೀರಿನಿಂದ ಆರೋಗ್ಯಕ್ಕೆ ತೊಂದರೆಯಾಗುತ್ತಿದೆ ಎಂಬುದನ್ನು ಗಣನಗೆ ತೆಗೆದುಕೊಂಡಿದ್ದಾರೆ. ಈ ಎಲ್ಲಾ ಕಾರಣಗಳಿಗಾಗಿ, ಶಿರಾ ತಾಲ್ಲೂಕಿನಲ್ಲಿ ದೂರುದಾರರು ಆಪಾದಿಸಿದಂತೆ ಶುದ್ಧ ಕುಡಿಯುವ ನೀರಿನ ಘಟಕಗಳು ಇನ್ನು ಸಹಿತ ಕೆಲ ಘಟಕಗಳು ಸೂಕ್ತ ಪ್ರಮಾಣ ಪತ್ರವನ್ನು ಪಡೆಯದೇ ಕಾರ್ಯ ನಿರ್ವಹಿಸುತ್ತಿವೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಅಂದರೆ ಜಿಲ್ಲಾ ಅಂಕಿತ ಅಧಿಕಾರಿಗಳ ವರದಿಯಲ್ಲಿ 57 ಘಟಕಗಳು ಡಾಕ್ಟರ್ಸ್ ವಾಟರ್ಸ್, ಶ್ರೀ ಕ್ಷೇತ್ರ ಧರ್ಮಸ್ಥಳ, ಇತರೆ ಸಂಘ ಸಂಸ್ಥೆಗಳಿಂದ ನಡೆಯುತ್ತಿದ್ದು, ಈ ಘಟಕಗಳು ಸಮುದಾಯ ಕುಡಿಯುವ ನೀರಿನ ಘಟಕಗಳು (Loose Waters) ಘಟಕಗಳು ಆಗಿರುತ್ತವೆ. ಮುಂದಿನ ಆದೇಶದವರೆಗೆ ಸದರಿ ಘಟಕಗಳನ್ನು ಪಟ್ಟಿಯಿಂದ ಕೈಬಿಟ್ಟದೆ, ಉಳಿದ 13 ಘಟಕಗಳಲ್ಲಿ 2 ಘಟಕಗಳು ಆಯುಷ್ ಇಲಾಖೆಯ ವ್ಯಾಪ್ತಿಯಲ್ಲಿದ್ದು, ಉಳಿದ 11 ಘಟಕಗಳಲ್ಲಿ 8 ಘಟಕಗಳಿಗೆ ಅಗತ್ಯ ಕ್ರಮ ಕೈಗೊಂಡಿದ್ದು, 3 ಘಟಕಗಳಿಗೆ ನೋಟಿಸ್ ಜಾರಿಯಾಗಿದೆ ಅಂತಾ ಮಾಹಿತಿ ನೀಡಿದ್ದಾರೆ.

11. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ದಿನಾಂಕ: 01/01/2019ರ ಜಿಲ್ಲಾ ಅಂಕಿತ ಅಧಿಕಾರಿಗಳು, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006, ತುಮಕೂರು ಜಿಲ್ಲೆ, ತುಮಕೂರು ವರದಿಯಲ್ಲಿ ತಿಳಿಸಿರುವಂತೆ ಸೂಕ್ತ ಪ್ರಾಧಿಕಾರದಿಂದ ಅಂದರೆ ಬಿ.ಐ.ಎಸ್., ಕಾಯ್ದೆ ಅನ್ವಯ ಸೂಕ್ತ ಪ್ರಮಾಣ ಪತ್ರ ಪಡೆಯದೇ ಇರುವ ಶುದ್ಧ ಕುಡಿಯುವ ನೀರಿನ ಘಟಕ ತೆರೆವುಗೊಳಿಸುವ ಬಗ್ಗೆ ಸೂಕ್ತ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ

ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

10/2/20

[ನ್ಯಾಯಮೂರ್ತಿ ಬಿ.ಎಸ್.ಪಾಟೀಲ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.